ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಒ.ಎಸ್.ನಂಃ 115/22**

ಪಿಡಬ್ಲ್ಯುಃ -1

<u>ದಿನಾಂಕಃ06.02.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ. ಡಿ ಎಂ ಕೆ ವಕೀಲರಿಂದಃ-</u>

8. ನಾನು ತಿರುಪತಿಗೆ ಹೋಗಿ ಬಂದ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ, ಅದನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವುದಿಲ್ಲ. ನಾನು ತಿರುಪತಿಗೆ ಹೋದಾಗ ನನ್ನ ಗಂಡ ಮನೆಯಲ್ಲಿ ಇದ್ದರು. ನನ್ನ ತಂದೆ ಸಹ ಇದ್ದರು. ಆದರೆ ಅವರಿಗೆ ಆಗ ಸ್ಟ್ರೋಕ್ ಆಗಿತ್ತು. ನಾನು ಕಂದಾಯ ಕಟ್ಟಿದ ನಂತರದ ನಮೂನೆ-3 ನ್ನು ಹಾಜರು ಪಡಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನಾನು ಹಾಜರು ಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ಕಂದಾಯ ಕಟ್ಟುವ ಪೂರ್ವದ ನಮೂನೆ-3 ನ್ನು ಹಾಜರು ಮಾಡಿದ್ದೇನೆ ಹೊರತು ಆನಂತರದ ನಮೂನೆ-3 ನ್ನು ಹಾಜರು ಪಡಿಸಿಲ್ಲ ಎಂದರೆ ಹಾಜರು ಪಡಿಸಿದ್ದೇನೆ. ನನ್ನ ಮನೆಗೂ, ಪ್ರತಿವಾದಿಯ ಮನೆಗೂ ತಡೆಗೋಡೆ ಇದ್ದ ಬಗ್ಗೆ ಭಾವಚಿತ್ರ ಹಾಜರು ಪಡಿಸಿದ್ದೀರಾ ಎಂದರೆ ಹಾಜರು ಪಡಿಸಿದ್ದೇನೆ. ಅದು ತಡೆಗೋಡೆ ಅಲ್ಲ ಆದರೆ ಕಾಂಪೌಂಡ್ ಗೋಡೆ ಆಗಿದೆ. ನಾನು ಹಾಜರು ಪಡಿಸಿದ ಭಾವಚಿತ್ರಗಳಲ್ಲಿ ನನ್ನ ಮನೆಗೂ ಪ್ರತಿವಾದಿಗಳ ಮನೆಗೂ ಕಾಂಪೌಂಡ್ ಗೋಡೆ ಇಲ್ಲ ಎಂದರೆ ಇದೆ. ಭಾವಚಿತ್ರಗಳಲ್ಲಿ ಕಾಣುವ ಗೋಡೆ ಕಾಂಪೌಂಡ್ ಗೋಡೆ ಅಲ್ಲ ಆದರೆ ಪ್ರತಿವಾದಿಗಳ ಮನೆಯ ಗೋಡೆ ಎಂದರೆ ಸರಿಯಲ್ಲ.

9. ಪ್ರತಿವಾದಿಗಳ ಮನೆಯ ಮೇಲೆ ಸುಮಾರು ಕಬ್ಬಿಣದ ರಾಡುಗಳನ್ನು ನಿಲ್ಲಿಸಿದ್ದಾರೆ ಎಂದರೆ ಕಾಂಪೌಂಡ್ ಗೋಡೆಯ ಮೇಲೆ ಪಿಲ್ಲರ್ ಹಾಕಲು ಸರಳನ್ನು ನಿಲ್ಲಿಸಿದ್ದಾರೆ. ನಮ್ಮ ಮನೆಯ ಮುಂದೆ ಮತ್ತು ಪ್ರತಿವಾದಿಗಳ ಮನೆಯ ಹಿಂದೆ ಕಾಲು ದಾರಿ ಇತ್ತು ಹಾಗೂ ಕಾರು ಹೋಗುವಷ್ಟು ಜಾಗ ಇರಲಿಲ್ಲ ಎಂದರೆ ಸರಿಯಲ್ಲ. ಮನೆಯ ಮುಂಭಾಗ ಸಿಮೆಂಟನ್ನು 13

ವರ್ಷಗಳ ಹಿಂದೆ ಹಾಕಿದ್ದೇವೆ. 13 ವರ್ಷದ ಹಿಂದೆ ನಮಗೂ ಮತ್ತು ಪ್ರತಿವಾದಿಗಳಿಗೂ ಯಾವುದೇ ರೀತಿಯ ಗಲಾಟೆಗಳು ಇರಲಿಲ್ಲ. ಪ್ರತಿವಾದಿ ಮನೆ ಬಿರುಕು ಬಿಟ್ಟ ಬಗ್ಗೆ ಮತ್ತು ಶಿಥಿಲಗೊಂಡ ಬಗ್ಗೆ ಭಾವಚಿತ್ರಗಳನ್ನು ಕೊಟ್ಟಿದ್ದೀರಾ ಎಂದರೆ ಕೊಟ್ಟಿದ್ದೇನೆ. ಪ್ರತಿವಾದಿಗಳು ಕಾಂಪೌಂಡ್ ಗೋಡೆಯನ್ನು ಸುಸ್ಥಿತಿಯಲ್ಲಿ ಇಡುವುದಾದರೆ ಬಣ್ಣ ಬಳಿದರೆ ತೊಂದರೆ ಇದೆಯಾ ತೊಂದರೆ ಇದೆ.

10. ನಮ್ಮ ಮನೆಗೂ ಪ್ರತಿವಾದಿಗಳ ಮನೆಗೂ 5 ಅಡಿ ದೂರ ಇದೆ. ನಾನು ನನ್ನ ಮನೆಯ ಮುಂದೆ ಇರುವ ಜಾಗಕ್ಕೆ ಕಂದಾಯ ಕಟ್ಟುತ್ತಿಲ್ಲ. ಪ್ರತಿವಾದಿಯ ಮನೆಯ ಗೋಡೆಗೆ ಹೊಂದಿಕೊಂಡು ಹಲಸಿನ ಗಿಡವನ್ನು ನೆಟ್ಟಿದ್ದೇವೆ ಅದು ಈಗ ಮರ ಆಗಿದ್ದು, ಅದನ್ನು ಆಗಾಗ ಕಡಿಯುತ್ತಿರುತ್ತೇವೆ. ಸದರಿ ಗಿಡವನ್ನು ನನ್ನ ತಂದೆ ನೆಟ್ಟಿದ್ದಾರೆ.

11. ಪ್ರತಿವಾದಿಗಳು ತಮಗೆ ಜಾಗ ಕಡಿಮೆ ಇದೆ ಎಂದು ಪ್ರತಿವಾದಿಗಳ ಮನೆ ಹಿಂದೆ ಇರುವ ಪೈಸಾರಿ ಜಾಗವನ್ನು ಮಂಜೂರು ಮಾಡಿ ಎಂದು ಡಿ ಸಿ ಗೆ ಪತ್ರ ಬರೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮಗೆ ಮಂಜೂರಾದ ಜಾಗದಲ್ಲೇ ಇದ್ದೇವೆ. ಪ್ರತಿವಾದಿಗಳು ಮಂಜೂರಿಗೆ ಅರ್ಜಿ ಹಾಕಿದ ವಿಷಯ ತಿಳಿದು ನನ್ನ ಮನೆ ಮುಂದೆ ಇರುವ ಪೈಸಾರಿ ಜಾಗವನ್ನು ರಸ್ತೆ ಮಾಡಿ ನಾನು ಬಳಸುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೈಸಾರಿ ಜಾಗ ಹೋಗುತ್ತದೆ ಎಂದು ಒಂದಲ್ಲ ಒಂದು ಕಾರಣಕ್ಕೆ ಪ್ರತಿವಾದಿಗಳ ಮೇಲೆ ಜಗಳ ತೆಗೆಯುತ್ತಿದ್ದೇನೆ ಎಂದರೆ ನಾನು ತೆಗೆಯುತ್ತಿಲ್ಲ ಅವರೇ ತೆಗೆಯುತ್ತಿದ್ದಾರೆ. ಪ್ರತಿವಾದಿಗಳ ಮನೆಯ ಮೇಲೆ ಪಿಲ್ಲರ್ ಹಾಕಿ ಮನೆ ಕಟ್ಟಿದರೆ ನನಗೆ ಯಾವುದೇ ತೊಂದರೆ ಆಗುವುದಿಲ್ಲ, ನಾನು ವಿನಾ ಕಾರಣ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

12. ಭಾವಚಿತ್ರಗಳನ್ನು ಈ ದಾವೆಗೆ ನಾನೇ ಸೃಷ್ಟಿ ಮಾಡಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ದಾವೆ ಸಲ್ಲಿಸಿ, ದಾವೆ ಇತ್ಯರ್ಥಕ್ಕೆ ಬಾಕಿ ಇರುವಾಗಲೇ ನ್ಯಾಯಾಲಯದ ಅನುಮತಿ ಪಡೆಯದೆ ಹೊಸದಾಗಿ ಕಟ್ಟಡ

ಕಟ್ಟಿದ್ದೇವೆ ಎಂದರೆ ನಗರ ಸಭೆಯಿಂದ ಅನುಮತಿ ಪಡೆದಿದ್ದೇವೆ. ನಾನು ನಗರ ಸಭೆಯಿಂದ ಅನುಮತಿ ಪಡೆದ ದಾಖಲೆಯನ್ನು ನ್ಯಾಯಾಯದ ಮುಂದೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮನೆಗೆ ಸಂಬಂಧಿಸಿದ ಮನೆಯ ನಕಾಶೆಯನ್ನು ನಾನು ಹಾಜರು ಪಡಿಸಿಲ್ಲ ಎಂದರೆ ಸರಿ. ನಾನು ಸಿ ಡಿ ಯನ್ನು ಈ ಪ್ರಕರಣಕ್ಕೆ ಸೃಷ್ಟಿ ಮಾಡಿಸಿದ್ದೇನೆ ಎಂದರೆ ಸರಿಯಲ್ಲ.

13. ಪ್ರತಿವಾದಿ ಬಿರುಕು ಬಂದ ಗೋಡೆಯ ಮೇಲೆ ಪಿಲ್ಲರ್ ಹಾಕಿದ್ದು, ಅದನ್ನು ತೆಗೆಯಬೇಕು ಎಂದು ನಾನು ದಾವೆ ಸಲ್ಲಿಸಿದ್ದೇನೆ. ನಾನು ಯಾವುದೇ ಸತ್ಯಾಸತ್ಯತೆ ಇಲ್ಲದೆ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಹೊರತು ಪಡಿಸಿ ಪ್ರತಿವಾದಿಗಳ ಮೇಲೆ ನಮ್ಮ ವಠಾರದಲ್ಲಿ ಇರುವವರು ಯಾರೂ ದಾವೆ ಸಲ್ಲಿಸಿಲ್ಲ ಎಂದರೆ ಸರಿ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ. ಎಫ್. ಸಿ., ಮಡಿಕೇರಿ.**